# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2248 (2713) |
| ಸದಸ್ಯರ ಹೆಸರು | : | ಶ್ರೀ ಅ. ದೇವೇಗೌಡ |
| ಉತ್ತರಿಸುವ ದಿನಾಂಕ | : | 25.03.2022 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಡಾ\|\|ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ/ಕರ್ನಾಟಕ ಅದಿಜಾಂಬವ ಅಭಿವೃದ್ಧಿ ನಿಗಮ/ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ/ಭೋವಿ ಅಭಿವೃದ್ಧಿ ನಿಗಮಗಳಲ್ಲಿ ವಯೋ ನಿವೃತ್ತಗೊಂಡ ಸರ್ಕಾರಿ ಅಧಿಕಾರಿ/ನೌಕರರು ಮತ್ತು ದಿನಗೂಲಿ/ಗುತ್ತಿಗೆ ಅಭ್ಯರ್ಥಿಗಳನ್ನು ಪುನರ್ ನೇಮಕ ಮಾಡಿಕೊಂಡು ಮುಂದುವರೆಸಲಾಗುತ್ತಿದೆಯೇ; (ಇದ್ದಲ್ಲಿ, ಅಂತಹವರ ಹೆಸರು, ಹುದ್ದೆ ವಿವರ ನೀಡುವುದು) | ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮಗಳಲ್ಲಿ ವಯೋ ನಿವೃತ್ತಗೊಂಡ ಸರ್ಕಾರಿ ಅಧಿಕಾರಿ/ನೌಕರರು ಮತ್ತು ದಿನಗೂಲಿ/ಗುತ್ತಿಗೆ ಅಭ್ಯರ್ಥಿಗಳನ್ನು ಪುನರ್ ನೇಮಕ ಮಾಡಿಕೊಂಡಿರುವುದಿಲ್ಲ.<br><br>ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ನಿವೃತ್ತಿಗೊಂಡ ಯಾವುದೇ ಅಧಿಕಾರಿ/ನೌಕರರು ಮತ್ತು ದಿನಗೂಲಿ/ಗುತ್ತಿಗೆ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಂಡು ಮುಂದುವರೆಸಿರುವುದಿಲ್ಲ. ವಯೋ ನಿವೃತ್ತಿಗೊಂಡ ಶ್ರೀ ಡಿ. ಸಂಪತ್ ಕುಮಾರ್, ದ್ವಿತೀಯ ದರ್ಜೆ ಸಹಾಯಕರು ಹಾಗೂ ಶ್ರೀಮತಿ ಗುಣಜ್ಯೋತಿ ಆರ್., ಶೀಘ್ರಲಿಪಿಗಾರರನ್ನು ಕಿಯೋನಿಕ್ಸ್ ಸಂಸ್ಥೆ ಮೂಲಕ ಹೊರಮೂಲ ಆಧಾರದ ಮೇಲೆ ತಾತ್ಕಾಲಿಕವಾಗಿ ಇವರ ಸೇವೆಯನ್ನು ಪಡೆಯಲಾಗುತ್ತಿದೆ. |
| (ಆ) | ಇಲ್ಲದಿದ್ದಲ್ಲಿ, ಇಂತಹ ಪ್ರಸ್ತಾವನೆ ಸಲ್ಲಿಸಿ ಮುಂದುವರೆಸಲು ಸರ್ಕಾರ ಕ್ರಮವಹಿಸಲಾಗುತ್ತಿದೆಯೇ: ಹಾಗಿದ್ದಲ್ಲಿ, ಅಂತಹವರ ಹೆಸರು ಸಮೇತ ಮಾಹಿತಿ ನೀಡುವುದು; | |
| (ಇ) | ನಿವೃತ್ತ ಅಧಿಕಾರಿ/ನೌಕರರನ್ನು ಮುಂದುವರೆಸಲು ಸರ್ಕಾರದಿಂದ ಅನುಮೋದನೆ ಪಡೆಯಲಾಗಿದೆಯೇ; ಹಾಗಿದ್ದಲ್ಲಿ ಪ್ರತಿ ನೀಡುವುದು; ಇಲ್ಲದಿದ್ದಲ್ಲಿ ಕಾರಣಗಳೇನು; (ವಿವರ ನೀಡುವುದು) | |
| (ಈ) | ನಿವೃತ್ತರಾದ ನೌಕರರನ್ನು ಮುಂದುವರೆಸಬಾರದೆಂಬ ಸರ್ಕಾರದ ಆದೇಶ ಇದೆಯೇ; ಇದ್ದಲ್ಲಿ, ಆದೇಶ ಉಲ್ಲಂಘಿಸಿ ನಿವೃತ್ತರಾದವರನ್ನು ಮುಂದುವರೆಸಲು ಕಾರಣಗಳೇನು; ಇದರಿಂದ ವಿದ್ಯಾವಂತ ನಿರುದ್ಯೋಗಿಗಳಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ; ನಿವೃತ್ತರಾದವರನ್ನು ಮುಂದುವರೆಸದಿರಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; (ಸವಿವರ ವರದಿ ನೀಡುವುದು) | |
| (ಉ) | ನಿವೃತ್ತರನ್ನು ಮುಂದುವರೆಸಲು ಕಾರಣರಾದ ಅಧಿಕಾರಿ/ನೌಕರರು ಯಾರು; ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ? | |

ಸಂಖ್ಯೆ: ಸಕಇ 187 ಎಸ್‌ಡಿಸಿ 2022

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು